## ಕವಿತೆ



**ಕೆ.ನಿರ್ಮಲ ಮರಡಿಹಳ್ಳಿ**

ಕಲೆ: ರೂಪಶ್ರೀ ಕಲ್ಲಿಗನೂರು

# ಅವರು ನಗುತ್ತಿಲ್ಲ



ಅಪರೂಪಕ್ಕೆ ಸಿಗುತ್ತಾರೆ
ಗುಬ್ಬಚ್ಚಿಗಳಂತೆ ಮಾತು
ಚೆನ್ನಾಗಿದ್ದೀರಾ... ?

ಕ್ಷಣಕಾಲ ಎಲ್ಲ ಮರೆತ ಹೂವಿನಂತೆ
ಮುಗುಳ್ನಗೆ ಸುಳಿದು
ಮಾತುಗಳನ್ನಾಡುತ್ತಿರುವಾಗಲೆ
ಒಡಲೊಳಗಿನ ಲಾವಾದ ಬಿಸಿ
ಬಡಿದು ಹಾಕುತ್ತವೆ ನಯವಾಗಿ
ನವೋಲ್ಲಾಸವ
ಮತ್ತೇನು ಮಕ್ಕಳು?

ಇನ್ನೇನು ಕಳಚಿ ಬೀಳುವುದೊ ಕಾರ್ಮೋಡ
ಭುವಿಯನ್ನೇ ಆವಾಹಿಸಿಕೊಳ್ಳುವಂತೆ ಮುನ್ನುಗ್ಗಿ
ನಿಂತ ನೆಲವೆ ಉಡುಗಿದಂತಾಗಿ
ನಾಲಿಗೆ ಎಳೆದೆಳೆದು ಮಾತು
ಇನ್ನೇನು ವಯಸ್ಸಾಯಿತು
ಮೊಮ್ಮಕ್ಕಳು?
ಒಂದೊ ಮಹಾಪ್ರವಾಹ ಇಲ್ಲಾ
ಮಹಾಯುದ್ಧ ಮತ್ತೇನು ಸಿಗುತ್ತಿದೆ?

ಬೇಸಿಗೆಯಲ್ಲೂ ಹರಿವ ನದಿಗಳಿಲ್ಲ
ಹದವಾಗಿ ಬೀಳುವ ಮಳೆಯಿಲ್ಲ
ನೀರಿನಾ ಹರಿವು ನಿರ್ಬಂಧಿಸಿ
ಸ್ಪರ್ಶಿಸಬೇಕಾದ ದಡಗಳ
ಉಸಿರ ಬಡಿದು ಹಾಹಾಕಾರ?

ಆಯ್ತಲ್ಲ, ಮತ್ತೆ ಸಿಗೋಣ
ಮೌನದಂತಾ ಮಾತು ಕೈ ಕುಲುಕಿದರೂ
ಅವರು ನಗುತ್ತಿಲ್ಲ.